# ಓಂಕಾರ



✤ ಯಾರಿಗೆ ಭಗವಂತನ ಸಾಕ್ಷಾತ್ಕಾರ ದೊರೆತಿದೆಯೋ ಆತನಿಗೆ ಸಂಧ್ಯಾವಂದನಾದಿ ಕರ್ಮಗಳು ಇರುವುದಿಲ್ಲ. ಆತನ ವಿಷಯದಲ್ಲಿ ಸಂಧ್ಯಾವಂದನೆ ಗಾಯತ್ರಿಯಲ್ಲಿ ಲೀನವಾಗುತ್ತದೆ. ಅದು ಹಾಗಾದಾಗ ಗಾಯತ್ರಿಯನ್ನು ಜಪಿಸಿದರೇ ಬೇಕಾದಷ್ಟು, ಬಳಿಕ ಗಾಯತ್ರಿ ಓಂಕಾರದಲ್ಲಿ ಲಯವಾಗುತ್ತದೆ. ಅದಾದ ನಂತರ ಗಾಯತ್ರಿಯನ್ನು ಜಪಿಸಬೇಕಾದ ಆವಶ್ಯಕತೆಯೇನಿರುವುದಿಲ್ಲ; ಆಗ ಕೇವಲ ''ಓಂ'' ಎಂದು ಜಪಿಸುತ್ತಿದ್ದರೇ ಸಾಕು.

✤ ಶ್ರೀರಾಮಕೃಷ್ಣರು: ಓಂಕಾರ ಶಬ್ದವೇ ಬ್ರಹ್ಮ. ಋಷಿಗಳು ಮುನಿಗಳು ಈ ಶಬ್ದಬ್ರಹ್ಮದ ಸಾಕ್ಷಾತ್ಕಾರಕ್ಕಾಗಿ ತಪಸ್ಸು ಮಾಡುತ್ತಿದ್ದರು. ಸಿದ್ಧಿ ದೊರೆಯಿತು ಅಂದರೆ ಕೇಳಬಹುದು ಆ ಶಬ್ದ - ತಾನಾಗೇ ನಾಭಿಯಿಂದ ಮೇಲಕ್ಕೆ ಏಳುವುದನ್ನು.

✤ ಕೆಲವು ಮಂದಿ ಋಷಿಗಳು ಕೇಳುತ್ತಾರೆ: 'ಕೇವಲ ಈ ಶಬ್ದವನ್ನು ಕೇಳುವುದರಿಂದಲೇ ಏನು ದೊರೆಯುತ್ತದೆ?' ದೂರದಿಂದ ಸಮುದ್ರದ ಕಲ್ಲೋಲ ಶಬ್ದವನ್ನು ಕೇಳಬಹುದು. ಅದನ್ನು ಹಿಡಿದು ಮುಂದುವರಿದರೆ ಸಮುದ್ರವನ್ನು ಮುಟ್ಟಬಹುದು. ಎಲ್ಲಿಯವರೆಗೆ ಕಲ್ಲೋಲ ಎಂಬುದು ಇರುವುದೊ ಅಲ್ಲಿಯವರೆಗೆ ಸಮುದ್ರವೆಂಬುದೂ ಇರಲೇಬೇಕು. ಹಾಗೇ ಅನಾಹತಧ್ವನಿಯನ್ನು ಹಿಡಿದು ಮುಂದುವರಿದರೆ ಅದರ ಪ್ರತಿಪಾದ್ಯ ಬ್ರಹ್ಮನನ್ನು ಮುಟ್ಟಬಹುದು. ಅದಕ್ಕೇ ಪರಮಪದ ಅಂತ ಹೆಸರು. ಆದರೆ 'ಅಹಂ' ಎಂಬುದು ಇತ್ತು ಎಂದರೆ ಆ ವಿಧದ ಸಾಕ್ಷಾತ್ಕಾರ ಸಾಧ್ಯವಿಲ್ಲ. ಯಾವ ಅವಸ್ಥೆಯಲ್ಲಿ 'ನಾನು', 'ನೀನು' 'ಏಕ', 'ಅನೇಕ' ಯಾವುದೂ ಇರದೋ ಆ ಅವಸ್ಥೆಯಲ್ಲಿ ಬ್ರಹ್ಮದರ್ಶನ ದೊರೆಯುತ್ತದೆ.

✤ ಪ್ರಶ್ನೆ: ಮಹಾಶಯರೆ, ಅನಾಹತ ಶಬ್ದ ಎಂಬುದು ಏನು?

ಶ್ರೀರಾಮಕೃಷ್ಣರು: ಅನಾಹತ ಶಬ್ದ ತಾನಾಗೇ ಸರ್ವದಾ ಆಗುತ್ತಿರುತ್ತದೆ. ಅದು ಪ್ರಣವ ಧ್ವನಿ. ಪರಬ್ರಹ್ಮನಿಂದ ಬರುತ್ತಿದೆ, ಯೋಗಿಗಳು ಕೇಳಬಲ್ಲರು. ವಿಷಯಾಸಕ್ತ ಜೀವಕ್ಕೆ ಅದನ್ನು ಕೇಳಲು ಸಾಧ್ಯವಿಲ್ಲ. ಯೋಗಿಗೆ ಗೊತ್ತಾಗುತ್ತದೆ, ಅದು ತನ್ನ ನಾಭಿಯಿಂದಲೂ ಮತ್ತು ಕ್ಷೀರಸಾಗರಶಾಯಿಯಾದ ಪರಬ್ರಹ್ಮನಿಂದಲೂ ಹೊರಡುತ್ತಿದೆ ಎಂಬುದಾಗಿ.

✤ ನಾನು ಗಂಟೆಯ 'ಟಂ' ಶಬ್ದವನ್ನು ಉಪಮೆಯನ್ನಾಗಿ ಕೊಡುತ್ತೇನೆ. 'ಟ-ಅ-ಆ- ಮ--' ಅಂತ ಶಬ್ದ ಮಾಡುತ್ತದೆ. ಇದು ಲೀಲೆಯಿಂದ ನಿತ್ಯದಲ್ಲಿ ಲಯವಾಗುತ್ತದೆ. ಸ್ಥೂಲ, ಸೂಕ್ಷ್ಮ, ಕಾರಣಗಳಿಂದ ಮಹಾಕಾರಣದಲ್ಲಿ ಲಯವಾಗುವಿಕೆ. ಜಾಗ್ರತ್, ಸ್ವಪ್ನ, ಸುಷುಪ್ತಿಗಳಿಂದ ತುರೀಯದಲ್ಲಿ ಲಯವಾಗುವಿಕೆ. ಮತ್ತೆ ಗಂಟೆ ಶಬ್ದ ಆಯಿತು ಅಂದರೆ ಅದು ಮಹಾಸಮುದ್ರಕ್ಕೆ ಒಂದು ಭಾರವಾದ ವಸ್ತುವನ್ನು ಬಿಸಾಡಿದ ಹಾಗೆ. ಆಗ ಮತ್ತೆ ಅಲೆಗಳು ಆರಂಭವಾಗುತ್ತವೆ. ನಿತ್ಯದಿಂದ ಲೀಲೆಯ ಆರಂಭ, ಮಹಾಕಾರಣದಿಂದ ಸ್ಥೂಲ ಸೂಕ್ಷ್ಮ ಕಾರಣಶರೀರಗಳ ಆರಂಭ - ಆ ತುರೀಯದಿಂದಲೇ ಜಾಗ್ರತ್ ಸ್ವಪ್ನ ಸುಷುಪ್ತಿ ಮೊದಲಾದ ಅವಸ್ಥೆಗಳು ಆರಂಭವಾಗುತ್ತವೆ. ಮತ್ತೆ ಆ ಮಹಾಸಮುದ್ರದ ಅಲೆಗಳು ಆ ಮಹಾ ಸಮುದ್ರದಲ್ಲೇ ಲಯವಾಗುತ್ತವೆ, ನಿತ್ಯದಿಂದ ಲೀಲೆ, ಲೀಲೆಯಿಂದ ನಿತ್ಯ. ಅದಕ್ಕಾಗೇ ನಾನು 'ಟಂ' ಎಂಬ ಶಬ್ದವನ್ನು ಉಪಮೆಯಾಗಿ ಕೊಡೋದು. ನಾನು ಇವನ್ನೆಲ್ಲಾ ಸಾಕ್ಷಾತ್ತಾಗಿ ನೋಡಿದ್ದೇನೆ. ನನಗೆ ಭಗವತಿ ಚಿತ್‌ಸಮುದ್ರವನ್ನು ತೋರಿಸಿದ್ದಾಳೆ. ಅದಕ್ಕೆ ಮಿತಿ ಎಂಬುದೇ ಇಲ್ಲ. ಅದರಿಂದಲೇ ಈ ಇಡೀ ಲೀಲೆ ಆರಂಭವಾಯಿತು, ಮತ್ತೆ ಅದರಲ್ಲೇ ಅದು ಲಯವಾಗಿ ಹೋಯಿತು, ಕೋಟಿ ಕೋಟಿ ಬ್ರಹ್ಮಾಂಡಗಳು ಆ ಚಿದಾಕಾಶದಲ್ಲೇ ಉದ್ಭವವಾದವು, ಮತ್ತೆ ಅದರಲ್ಲೇ ಲಯವಾದುವು; ನಿಮ್ಮ ಶಾಸ್ತ್ರಗ್ರಂಥಗಳು ಏನು ಹೇಳುವವೊ ಅದು ನನಗೆ ಅಷ್ಟೊಂದಾಗಿ ಗೊತ್ತಿಲ್ಲ.

✤ ಓಂಕಾರವನ್ನು ಒಮ್ಮೆ ಪಠಿಸುವುದರಿಂದಲೇ ಸಮಾಧಿ ಉಂಟಾದರೆ ಆಗ ಅದು ಪೂರ್ಣ ಹಣ್ಣು.

✤ ಈ ಮಾಯಾಕಲ್ಪಿತ ಜೀವಜಗತ್ತನ್ನು ದಾಟಿದ ಒಡನೆಯೇ, ನಿತ್ಯನಾದವನ್ನು ಭೇದಿಸಿದೊಡನೆಯೇ ಸಮಾಧಿ. ಓಂಕಾರ ಸಾಧನೆ ಮಾಡುತ್ತ ನಾದ ಭೇದವಾಗಿಬಿಡುತ್ತದೆ; ಸಮಾಧಿ ಉಂಟಾಗುತ್ತದೆ.

✤ ಸಮಾಧಿಯಲ್ಲಿ ಏನು ಅನುಭವ ದೊರೆಯುವುದೊ ಅದನ್ನು ಬಾಯಿಂದ ಹೇಳಲಾಗೋದಿಲ್ಲ. ಇಳಿದುಬಂದು ಎಲ್ಲೋ ಒಂದು ಕಿಂಚಿತ್ತು ಅದರ ಆಭಾಸದ ಹಾಗಿರುವುದನ್ನು ಮಾತ್ರ ತಿಳಿಸಬಹುದು. ಸಮಾಧಿ ಇಳಿಮುಖವಾದ ನಂತರ ಯಾವಾಗ ನಾನು 'ಓಂ, ಓಂ', ಎಂದು ಹೇಳುವೆನೋ, ನಾನು ಆಗಲೇ ಒಂದು ನೂರು ಮೊಳ ಕೆಳಕ್ಕೆ ಇಳಿದುಬಿಟ್ಟಿರುತ್ತೇನೆ. ಬ್ರಹ್ಮನು ವೇದವಿಧಿಗಳಿಗೆ ಅತೀತನು, ಬಾಯಿಂದ ವರ್ಣಿಸಲಾಗೋದಿಲ್ಲ. ಅಲ್ಲಿ 'ನಾನು', 'ನೀನು' ಎಂಬ ಭಾವನೆ ಇಲ್ಲವೇ ಇಲ್ಲ.

ಶ್ರೀರಾಮಕೃಷ್ಣವಚನವೇದದಿಂದ



# ಜವಾಬ್ದಾರಿಯ ಪ್ರಜ್ಞೆ

ಕೆ.ವಿ.ಸ್ವರ್ಣಗೌರಿ

ಜೀವನದ ವಿವಿಧ ಹಂತಗಳಲ್ಲಿ ಜವಾಬ್ದಾರಿಯ ಪ್ರಜ್ಞೆ ವಿಕಸನಗೊಂಡಾಗ ನಾವು ಬದುಕಿನಲ್ಲಿ ಅರ್ಥವನ್ನು ಕಂಡುಕೊಳ್ಳುತ್ತೇವೆ. ನಮ್ಮ ಬದುಕು ಸಾರ್ಥಕಗೊಳ್ಳಲು ಈ ಪ್ರಜ್ಞೆ ಅತ್ಯಗತ್ಯವೆಂಬ ಅಂಶವನ್ನು ವಿಶ್ಲೇಷಿಸಿರುವ ಲೇಖಕಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.

'ಇಂದಿನ ಮಗು ಮುಂದಿನ ಪ್ರಜೆ' - ಮಕ್ಕಳೇ ಆಸ್ತಿ. ಮಗು ಸತ್ಪ್ರಜೆಯಾಗದಿದ್ದರೆ ದೇಶಕ್ಕೆ ಹೊರೆಯಾಗುವುದು. ಕೇವಲ ದೈಹಿಕ ಬೆಳವಣಿಗೆಯೊಂದೇ ಪರಿಪೂರ್ಣವ್ಯಕ್ತಿಯನ್ನು ರೂಪಿಸದು. ಮಕ್ಕಳಲ್ಲಿ 'ಅಹಂ' ಪ್ರಜ್ಞೆಯು ಸುಪ್ತಾವಸ್ತೆಯಲ್ಲಿರುವುದರಿಂದ ತಮ್ಮ ಜೀವನವನ್ನು ನಿರ್ವಹಿಸುವ ಪ್ರಜ್ಞೆ ಇರದು. ಆದರೆ ಮಗುವಿನ ದೈಹಿಕ ಬೆಳವಣಿಗೆಯೊಂದಿಗೆ 'ಅಹಂ' ಪ್ರತ್ಯಯವೂ ಮೂಡುತ್ತದೆ. ಇದರೊಂದಿಗೆ ಜವಾಬ್ದಾರಿ ಅಥವಾ ಹೊಣೆಗಾರಿಕೆಯ ಪ್ರಜ್ಞೆಯೂ ಮೂಡಬೇಕು. ಆಗಲೇ ಮಾನಸಿಕ, ನೈತಿಕ, ಆಧ್ಯಾತ್ಮಿಕ ಬೆಳವಣಿಗೆ ಸಾಧ್ಯವಾಗಿ ಒಬ್ಬ ಸುಸಂಪನ್ನ ವ್ಯಕ್ತಿಯ ನಿರ್ಮಾಣವಾಗುವುದು. ಮೊದಲು ಭೌತಿಕವಾಗಿ, ಮಾನಸಿಕವಾಗಿ ಪರಾವಲಂಬಿಯಾದ ಮಗು ಬೆಳೆದಂತೆ ಸಂಪೂರ್ಣ ಸ್ವತಂತ್ರವಾಗುತ್ತದೆ. 'ಸ್ವತಂತ್ರವೇ ಬೆಳವಣಿಗೆಯ ಏಕಮಾತ್ರ ನಿಯಮ' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೨, ಪು.೫೫)*

ವ್ಯಕ್ತಿತ್ವವನ್ನು ರೂಪಿಸುವಲ್ಲಿ ಹೊಣೆಗಾರಿಕೆಯ ಪಾತ್ರ ಹಿರಿದು, ಮೌಲ್ಯವಿಲ್ಲದ ಪದಾರ್ಥಗಳನ್ನು ನಾವು ಇಟ್ಟುಕೊಳ್ಳುವುದಿಲ್ಲ. ಜವಾಬ್ದಾರಿಯ ಪ್ರಜ್ಞೆ ಮೂಡದಿದ್ದರೆ ನಮ್ಮ ಜೀವನಕ್ಕೂ ನಾವು ಮೌಲ್ಯವನ್ನು ನೀಡುವುದಿಲ್ಲ. ಮೌಲ್ಯವಿಲ್ಲದ ಜೀವನದಿಂದ ಏನನ್ನು ಸಾಧಿಸಬಹುದು? ''ನಾವೇ ಎಲ್ಲಕ್ಕೂ ಹೊಣೆಗಾರರಾದಾಗ ಮಾತ್ರ ನಮಗೆ ಅತಿ ಶ್ರೇಷ್ಠವಾದ ಕೆಲಸವನ್ನು ಮಾಡಲು ಸಾಧ್ಯವಾಗುತ್ತದೆ. ನಿಮ್ಮ ಕೈಗೆ ಒಂದು ಸಣ್ಣ ಮಗುವನ್ನು ಕೊಟ್ಟರೆ ನೀವು ಹೇಗೆ ವರ್ತಿಸುತ್ತೀರಿ? ತತ್ಕಾಲಕ್ಕೆ ನಿಮ್ಮ ಇಡೀ ಜೀವನ ಬದಲಾಯಿಸುವುದು. ನೀವು ಏನಾದರೂ ಆಗಿರಿ. ತಾತ್ಕಾಲಿಕವಾಗಿಯಾದರೂ ನೀವು ನಿಃಸ್ವಾರ್ಥಿಗಳಾಗಬೇಕು. ಜವಾಬ್ದಾರಿ ನಿಮ್ಮ ಮೇಲೆ ಬಿದ್ದರೆ ನಿಮ್ಮ ದುಷ್ಟ ಸ್ವಭಾವವನ್ನೆಲ್ಲಾ ಬಿಡುವಿರಿ. ನಿಮ್ಮ ಇಡೀ ಶೀಲ ಬದಲಾಯಿಸುವುದು'' ಎನ್ನುವ ಸ್ವಾಮಿ ವಿವೇಕಾನಂದರ ನುಡಿಗಳಲ್ಲಿ ನಾವು ಹೊಣೆಗಾರಿಕೆಯ ಹಿರಿಮೆಯನ್ನು ಕಾಣುತ್ತೇವೆ. *(ಕೃತಿಶ್ರೇಣಿ, ಸಂ.೭, ಪು.೧೩೨).* ಪರಿಪೂರ್ಣ ವ್ಯಕ್ತಿಯ ವಿಕಸನದಲ್ಲಿ ಮಹತ್ವದ ಪಾತ್ರ ವಹಿಸುವ ಈ ಜವಾಬ್ದಾರಿ ಪ್ರಜ್ಞೆಯ ಆರು ಮುಖಗಳನ್ನು ಅಧ್ಯಯನ ಮಾಡೋಣ:

## ವೈಯಕ್ತಿಕ ಜವಾಬ್ದಾರಿ

ಸಾಮಾನ್ಯವಾಗಿ ಜನರನ್ನು ಎರಡು ವಿಧವಾಗಿ ವರ್ಗೀಕರಿಸಬಹುದು. ತಮ್ಮ ಜೀವನದಲ್ಲಿ ನಡೆಯುವ ಎಲ್ಲಾ ಅಹಿತಕರ ಘಟನೆಗಳಿಗೆ ಇತರ ವ್ಯಕ್ತಿಗಳನ್ನೋ, ಪರಿಸ್ಥಿತಿಯನ್ನೊ ದೂರುವ ವರ್ಗದವರು ಒಂದು ವಿಧ. ಇವರನ್ನು 'Character disorders' ಎಂದು ಕರೆಯುತ್ತಾರೆ. ಇನ್ನೊಂದು ವರ್ಗದವರು ಎಲ್ಲಾ ತಪ್ಪುಗಳಿಗೂ ತಮ್ಮನ್ನೇ ಹಳಿದುಕೊಳ್ಳುತ್ತಾ ಕೊರಗಿ, ಕೊರಗಿ ಕುಗ್ಗುವರು. ಇವರೇ 'Neurosis.' ಆದರೆ ಈ ಜೀವನದಲ್ಲಿ ಯಾವುದಕ್ಕೆ ನಾವು ಹೊಣೆ, ಯಾವುದಕ್ಕೆ ಅಲ್ಲ ಎಂಬುದನ್ನು ತಿಳಿಯುವುದೇ ಮಾನವ ಅಸ್ತಿತ್ವದ ಅತಿ ಕ್ಲಿಷ್ಟಕರವಾದ ಸಮಸ್ಯೆ *(ನೋಡಿ: The Road Less Travelled, ಪು. ೩೭)* ವಾಸ್ತವಿಕವಾಗಿ ಎಲ್ಲಾ ಘಟನೆಗಳಿಗೂ ನಾವರ್ಧ ಕಾರಣರಾದರೆ, ಬಾಹ್ಯ ಪ್ರಪಂಚ ಅರ್ಧ ಕಾರಣ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು, ''ನಿಮಗೆ ಬಿದ್ದ ಪ್ರತಿಯೊಂದು ಪೆಟ್ಟೂ, ನೀವೇ ಅದಕ್ಕೆ ಸಿದ್ಧರಾದುದರಿಂದ ಬಿತ್ತು. ನೀವು ಅರ್ಧ ಮಾಡಿದಿರಿ, ಬಾಹ್ಯ ಪ್ರಪಂಚ ಅರ್ಧ ಮಾಡಿತು. ಪೆಟ್ಟು ಬಂದದು ಹೀಗೆ'' ಎನ್ನುತ್ತಾರೆ. *(ಕೃತಿಶ್ರೇಣಿ, ಸಂ.೬, ಪು.೨೪೮)*

ನಾವೇ ಎಲ್ಲಕ್ಕೂ ಎಂದು ಹೊಣೆಗಾರರಾಗುವೆವೋ ಆಗಲೇ ನಮ್ಮ ಅತಿಶ್ರೇಷ್ಠ ಶೀಲ ವ್ಯಕ್ತವಾಗುವುದು. ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಈ ಸತ್ಯವು ನಮಗೆ ಗೋಚರವಾಗದಿರದು.

ಶ್ರೇಷ್ಠ ಶೀಲ ವ್ಯಕ್ತವಾಗುವ ಪರಿಯನ್ನು ಸ್ವಾಮೀಜಿ ತಿಳಿಸಿಕೊಡುತ್ತಾರೆ: ''ನಾವು ಮತ್ತಾರನ್ನೂ ಸೆಳೆಯದೆ ಇರುವಾಗ, ದೂರುವುದಕ್ಕೆ ಯಾವ ದೆವ್ವವೂ ಇಲ್ಲದೆ ಇರುವಾಗ, ನಮ್ಮ ಹೊರೆಯನ್ನು ಹೊರುವುದಕ್ಕೆ ಯಾವ ಸಾಕಾರ ದೇವರೂ ಇಲ್ಲದೆ ಇರುವಾಗ, ನಾವೇ ಎಲ್ಲಕ್ಕೂ ಹೊಣೆಗಾರರಾದಾಗ, ನಾವು ನಮ್ಮ ಶೀಲದ ಭವ್ಯ ಶಿಖರಕ್ಕೆ ಏರುವೆವು. ನನ್ನ ಅದೃಷ್ಟಕ್ಕೆ ನಾನೇ ಹೊಣೆ. ನಾನೇ ನನ್ನ ಒಳ್ಳೆಯದಕ್ಕೆ ಕಾರಣ, ನಾನೇ ನನ್ನ ಕೆಟ್ಟದಕ್ಕೆ ಕಾರಣ.'' *(ಕೃತಿಶ್ರೇಣಿ, ಸಂ.೨, ಪು.೧೫೨)*

**ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್।**
**ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ॥** *(ಗೀತೆ, ೬.೫)*

'ತನ್ನನ್ನು ತಾನೇ ಮೇಲೆತ್ತಿಕೊಳ್ಳಬೇಕು, ತನ್ನನ್ನು ಕುಗ್ಗಿಸಿಕೊಳ್ಳಬಾರದು; ಏಕೆಂದರೆ ತಾನೇ ತನಗೆ ಬಂಧು ಮತ್ತು ತಾನೇ ತನ್ನ ಶತ್ರು' ಎನ್ನುವಲ್ಲಿ ಶ್ರೀಕೃಷ್ಣನೂ ಇದೇ ಸಂದೇಶವನ್ನು ನೀಡುತ್ತಾನೆ. ಎಲ್ಲಾ ಆಚಾರ್ಯರ, ಜಗದ್ಗುರುಗಳ, ಅವತಾರ ಪುರುಷರ, ಶಾಸ್ತ್ರ ಗ್ರಂಥಗಳ ಸಂದೇಶವೂ ಇದೇ. ಪ್ರಗತಿಗೆ ಇದೊಂದೇ ದಾರಿ.

ಇನ್ನು ಕೆಲವರು ಕರ್ತವ್ಯದ ಹೆಸರಿನಲ್ಲಿ ತಮ್ಮನ್ನೇ ಕಡೆಗಣಿಸುತ್ತಾರೆ. ''ಕರ್ತವ್ಯವೆಂಬುದು ಬೇಸಿಗೆಯ ನಡುಹಗಲಿನ ಸೂರ್ಯನಂತೆ ನಮ್ಮನ್ನು ದಹಿಸುವುದು'' ಎಂದು ಎಚ್ಚರಿಸುತ್ತಾರೆ ಸ್ವಾಮೀಜಿ. *(ಕೃತಿಶ್ರೇಣಿ, ಸಂ.೩, ಪು.೧೧೩)*. ನನ್ನ ಆರೋಗ್ಯ, ನೆಮ್ಮದಿ, ಶಾಂತಿ, ಸಂತೋಷಗಳನ್ನು ಕಾಪಾಡಿಕೊಳ್ಳುವುದು ಸಹ ವೈಯಕ್ತಿಕ ಜವಾಬ್ದಾರಿಯ ಒಂದು ಅಂಶ.

ಸುಪ್ರಸಿದ್ಧ ಹೃದಯತಜ್ಞ ವೈದ್ಯ ಸುಧೀರನು ಸದಾ ಕಾರ್ಯನಿರತ. ಇತರರ ಕರೆಗೆ ಓಗೊಡುವುದರಲ್ಲೇ ದಿನವೆಲ್ಲಾ ಕಳೆದು ಮನೆಗೆ ಹಿಂತಿರುಗುವ ವೇಳೆಗೆ ಸಂಪೂರ್ಣ ದಣಿದಿರುತ್ತಿದ್ದನು. ಬರಬರುತ್ತಾ ಜೀವನ ನಿಸ್ಸಾರವೆನಿಸಿ ಮನೋವೈದ್ಯರನ್ನು ಭೇಟಿ ಮಾಡಿದನು. ಅವರು ಒಂದು ಪ್ರಶ್ನೆ ಕೇಳಿದರು, ''ರೋಗಿಯೊಬ್ಬ ಶಸ್ತ್ರಚಿಕಿತ್ಸೆಗಾಗಿ ನಿಮ್ಮ ಬಳಿ ಬರುವನು. ಅವನಿಗೆ ಶಸ್ತ್ರಚಿಕಿತ್ಸೆ ಮಾಡಿದರೆ ನೀವು ಬದುಕುವುದಿಲ್ಲ, ಮಾಡದಿದ್ದರೆ ಆತ ಉಳಿಯೊಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನಿಮ್ಮ ನಿರ್ಧಾರವೇನು?'' ಬಹಳ ಹೊತ್ತು ಯೋಚಿಸಿದ ಸುಧೀರನು, ''ನಾನು ಬದುಕುವುದೇ ಉತ್ತಮ. ಇತರರನ್ನು ಉಳಿಸಲು ನನ್ನನ್ನೇ ಬಲಿಕೊಡುವುದರಲ್ಲಿ ಅರ್ಥವಿಲ್ಲ'' ಎಂದು ಉತ್ತರಿಸಿದನು. ಇದು ಆತನ ಜೀವನಕ್ಕೆ ಒಂದು ಹೊಸ ತಿರುವು ನೀಡಿತು. ಇತರರಿಗೆ ಆನಂದ, ದಯೆ, ಸ್ವಾಂತನ, ಸ್ವಾತಂತ್ರ್ಯ ತರುವುದರ ಜೊತೆಗೆ ಅವುಗಳನ್ನು ತಾನೂ ಸ್ವತಃ ಅನುಭವಿಸುವುದೇ ಸಂತೋಷದ ಗುಟ್ಟು ಎಂಬ ಸತ್ಯವನ್ನರಿತನು ವೈದ್ಯ ಸುಧೀರ. *(ನೋಡಿ: '**Living Greatness**' by Joseph Law – p.24)*

ವೇದಾಂತದ 'ದಶಮಸ್ತ್ವಮಸಿ'(ಹತ್ತನೆಯವ ನೀನು) ಎಂಬ ಕಥೆಯ ಸಂದೇಶವೂ ಇದೇ. ಒಮ್ಮೆ ಹತ್ತು ಜನ ಬುದ್ಧಿವಂತರು ಯಾವುದೋ ಕಾರ್ಯನಿಮಿತ್ತವಾಗಿ ಒಂದು ಪ್ರದೇಶಕ್ಕೆ ಹೋಗುತ್ತಿದ್ದರು. ದಾರಿಯಲ್ಲಿ ಒಂದು ನದಿ ದಾಟಬೇಕಾಗಿ ಬಂತು. ಎಲ್ಲರೂ ಸುರಕ್ಷಿತವಾಗಿ ತಲುಪಿರುವೆವೆ ಎಂಬುದನ್ನು ಪರಾಮರ್ಶಿಸಲು ಯೋಚಿಸಿ, ಒಬ್ಬಾತನು ಗಣನೆ ಮಾಡಲು ಪ್ರಾರಂಭಿಸಿದ. ತನ್ನನ್ನೇ ಲೆಕ್ಕ ಹಾಕಲು ಮರೆತ ಭೂಪ, ತಾವು ಒಂಬತ್ತು ಜನರಿದ್ದೇವೆ, ಒಬ್ಬ ನೀರಿನಲ್ಲಿ ಮುಳುಗಿಹೋಗಿರುವನೆಂದು ಅಳಲು ಪ್ರಾರಂಭಿಸಿದ. ಇನ್ನೊಬ್ಬ ಎಣಿಸುವೆನೆಂದು ಮುಂದೆ ಬಂದ. ಆತನು ತನ್ನನ್ನೇ ಮರೆತ! ಹೀಗೆ ಎಲ್ಲರೂ ಒಬ್ಬೊಬ್ಬರಾಗಿ ಗಣನೆ ಮಾಡತೊಡಗಿದರು. ಏನೇ ಮಾಡಿದರೂ ಒಂಬತ್ತೇ ಜನ! ಎಲ್ಲರೂ ಹೀಗೆ ಗಟ್ಟಿಯಾಗಿ ರೋದಿಸುತ್ತಿರುವುದನ್ನು ಕೇಳಿದ ದಾರಿಹೋಕನೊಬ್ಬ ಕಾರಣ ವಿಚಾರಿಸಲು, ನಡೆದ ಸಂಗತಿ ತಿಳಿಯಿತು. ಆತ ಕೂಡಲೇ ಎಲ್ಲರನ್ನೂ ಸಾಲಾಗಿ ನಿಲ್ಲಿಸಿ ಗಣನೆ ಮಾಡಿದ. ಆಗ ಹತ್ತು ಜನರೂ ಇರುವುದನ್ನು ಅವರೆಲ್ಲ ಅರಿತರು. ಎಲ್ಲರೂ ಸಂತೋಷದಿಂದ ಕುಣಿದಾಡಿದರು!

ಆದ್ದರಿಂದ ನಮ್ಮ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಆರೋಗ್ಯವನ್ನು ಕಾಪಾಡಿಕೊಳ್ಳುವುದೂ ಸಹ ನಮ್ಮ ವೈಯಕ್ತಿಕ ಜವಾಬ್ದಾರಿ ಹಾಗೂ ಕರ್ತವ್ಯ ಎಂಬುದನ್ನು ಮರೆಯಬಾರದು.

### ಸಾಮಾಜಿಕ ಜವಾಬ್ದಾರಿ

ಸಮಾಜವೆಂದರೆ ವ್ಯಕ್ತಿಗಳ ಸಮೂಹ. ಶೀಲವಂತ ವ್ಯಕ್ತಿಗಳೇ ಆರೋಗ್ಯಕರ ಸಮಾಜದ ಭದ್ರ ಬುನಾದಿ, ಯಾವುದೇ ಕೆಲಸವೂ ವೈಯಕ್ತಿಕವಾದುದಲ್ಲ , ಎಲ್ಲಕ್ಕೂ ಒಂದು ಸಾಮಾಜಿಕ ಆಯಾಮವಿರುತ್ತದೆ ಎಂಬ ಅರಿವೇ ನಮ್ಮಲ್ಲಿ ಸಾಮಾಜಿಕ ಜವಾಬ್ದಾರಿಯನ್ನು ಜಾಗೃತಗೊಳಿಸುತ್ತದೆ. ಒಬ್ಬಾತನು ತನ್ನ ಜೀವನ ನಿರ್ವಹಿಸಲು ಕಳ್ಳತನ ಮಾಡುತ್ತಿರಬಹುದು. ಆದರೆ ಇದರಿಂದ ಸಮಾಜದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಮತ್ತೊಬ್ಬ ತನ್ನ ಹೊಟ್ಟೆಪಾಡಿಗಾಗಿ ಪ್ರಾಮಾಣಿಕವಾಗಿ, ನಿಷ್ಠೆಯಿಂದ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದರೆ ಅದು ಸಮಾಜದ ಸಂಸ್ಕೃತಿಯನ್ನು ರೂಪಿಸುತ್ತದೆ. ಹೀಗೆ ನಮ್ಮ ಪ್ರತಿಯೊಂದು ಕೆಲಸವೂ ವೈಯಕ್ತಿಕ ಎನಿಸಿದರೂ ಅದಕ್ಕೆ ಸಾಮಾಜಿಕ ಆಯಾಮವಿದ್ದೇ ಇರುತ್ತದೆ. ತನ್ನ ಸಾಮರ್ಥ್ಯವನ್ನೂ ಪ್ರತಿಭೆಯನ್ನೂ ಒಳ್ಳೆಯ ಅಥವಾ ಕೆಟ್ಟ ಸ್ವಭಾವವನ್ನೂ ಹೊರಗೆ ವ್ಯಕ್ತಪಡಿಸುವುದರ ಮೂಲಕ ಅವನು ಸಮಾಜದ ಸಂಸ್ಕೃತಿಯನ್ನು ರೂಪಿಸುತ್ತಾನೆ. ವ್ಯಕ್ತಿ ಪ್ರಜ್ಞೆ ಹಾಗೂ ಸಾಮಾಜಿಕ ಪ್ರಜ್ಞೆ ಒಂದೇ ನಾಣ್ಯದ ಎರಡು ಮುಖಗಳಂತೆ. ವ್ಯಕ್ತಿಯ ಸುಖ ಆರೋಗ್ಯಕರ ಸಮಾಜವನ್ನು ಅವಲಂಬಿಸಿರುತ್ತದೆ ಮತ್ತು ಆರೋಗ್ಯಕರ ಸಮಾಜವು ವ್ಯಕ್ತಿಯ ಶೀಲವನ್ನು ರೂಪಿಸುತ್ತದೆ. ಎರಡೂ ಒಂದಕ್ಕೊಂದು ಪೂರಕ.

ಒಮ್ಮೆ ತಮಿಳುನಾಡಿನ ಅಂಬಾಸಮುದ್ರ ಸಮೀಪದ ಆಳ್ವಾರ್ ಕುರುಚ್ಚಿ ದೇವಸ್ಥಾನದ ಗೋಪುರದೆದುರು ಯಾವುದೋ ತಮಿಳು ಚಲನಚಿತ್ರದ ಶೂಟಿಂಗ್ ಪ್ರಾರಂಭವಾಯಿತು. ನಾಯಕ ನಾಯಕಿ

ಅಶ್ಲೀಲ ವೇಷ ತೊಟ್ಟು ಹಾಡಿ ಕುಣಿಯಲಾರಂಬಿಸಿದ್ದನ್ನು ನೋಡುತ್ತಿದ್ದ ಹಳ್ಳಿಗರ ಸಂಯಮದ ಕಟ್ಟೆಯೊಡೆದು, ಕೂಡಲೇ ಸಿನಿಮಾ ತಂಡವನ್ನು ಘೆರಾವ್ ಮಾಡಿದರು. 'ದೇವಾಲಯದ ಪಾವಿತ್ರ್ಯ ರಕ್ಷಿಸಿ' ಎಂದು ಕೂಗುತ್ತಾ ಫಿಲ್ಮ್ ರೋಲ್ ಕೊಡಿ ಎಂದು ಉಗ್ರ ಪ್ರತಿಭಟನೆ ಮಾಡಿದರು. ಕೊನೆಗೆ ನಿರ್ದೇಶಕ ಈ ದೃಶ್ಯವನ್ನು ಚಿತ್ರದಿಂದ ತೆಗೆದುಹಾಕುತ್ತೇವೆ ಎಂದು ಸಹಿ ಹಾಕಿದ ಮೇಲೆ ಜನ ಶಾಂತರಾದರು. ಚಿತ್ರತಂಡ ಕಾಲ್ತೆಗೆದ ಮೇಲೆ ಜನ ಭಜನೆ, ಕೀರ್ತನೆ ಹಾಡುತ್ತಾ ಕುಣಿಯತೊಡಗಿದರು. *(ನೋಡಿ - ಪ್ರತಿಭಾ ವಿಕಾಸ್ ಪ್ರತಿಷ್ಠಾನದ ಪುಸ್ತಿಕೆ, 'ಕೈ ತುತ್ತು', ಪು.೭೮).* ಸಮಾಜದ ವಾತಾವರಣ ಕಾಪಾಡುವ ಜವಾಬ್ದಾರಿ ಪ್ರತಿಯೊಬ್ಬರ ಹೆಗಲ ಮೇಲೂ ಇದೆ. ಏಕೆಂದರೆ ಕಲುಷಿತ ವಾತಾವರಣದಲ್ಲಿ ಬದುಕುವುದು ನಾವೇ ತಾನೆ? ಉದಾಹರಣೆಗೆ, ಸಮಾಜದಲ್ಲಿ ಎಲ್ಲರೂ ಸುಳ್ಳು ಹೇಳುವುದನ್ನು ಅಭ್ಯಸಿಸಿದರೆ, ಆಗ ಯಾರು ಯಾರ ಮಾತನ್ನು ನಂಬಲು ಸಾಧ್ಯ? ಹಾಗೇ ಎಲ್ಲರೂ ಕಳ್ಳತನ ಮಾಡಲು ತೊಡಗಿದರೆ ಎಂತಹ ಭಯಾನಕ ವಾತಾವರಣ ಸೃಷ್ಟಿಯಾಗುತ್ತದೆ! ಇಂತಹ ಪರಿಸ್ಥಿತಿಯಲ್ಲಿ ಸುಖ, ಶಾಂತಿ, ನೆಮ್ಮದಿಗಳು ಕೇವಲ ನಿಘಂಟಿನಲ್ಲಿ ಮಾತ್ರ ಉಳಿಯುತ್ತದೆ. ಹೀಗೆ ಲಂಚ, ಮೋಸ, ಸುಲಿಗೆ, ಕುಡಿತ ಮುಂತಾದ ಅನೈತಿಕ ಗುಣಗಳು ಸಮಾಜವನ್ನು ವಿಷಪೂರಿತಗೊಳಿಸುತ್ತದೆ.

ಸಾಮಾಜಿಕ ಜವಾಬ್ದಾರಿಯ ಮತ್ತೊಂದು ಆಯಾಮವನ್ನು ನಾವು ಗಮನಿಸಬೇಕು. ನಮ್ಮ ಸುಖ ಜೀವನಕ್ಕೆ ಬೇಕಾದ ಮೂಲಭೂತ ವಸ್ತುಗಳೂ, ಇತರ ಸಲಕರಣೆಗಳೆಲ್ಲವೂ ಅನೇಕ ಜನರ ಪರಿಶ್ರಮ, ದುಡಿತದಿಂದ ದೊರೆತದ್ದು. ಸಮಾಜದಿಂದ ಒಳ್ಳೆಯದೆಲ್ಲವನ್ನೂ ಸ್ವೀಕರಿಸಿ, ಅದಕ್ಕೆ ಪ್ರತಿಯಾಗಿ ಏನನ್ನೂ ನೀಡದವರನ್ನು ಗೀತಾಚಾರ್ಯ ಕೃಷ್ಣ, **'ಯೋ ಭುಂಕ್ತೇ ಸ್ತೇನ ಏವ ಸಃ'** *(೩.೧೨)* ಎಂದಿದ್ದಾರೆ. ಅಂದರೆ, ಯಾರು ಏನನ್ನೂ ಅರ್ಪಿಸದೆ ಅನುಭವಿಸುತ್ತಾನೆಯೋ ಅವನು ಕಳ್ಳನೇ ಸರಿ ಎಂದರ್ಥ. ಆತನನ್ನು ಸ್ವಾರ್ಥಿ, ಕಪಟಿ ಎನ್ನುತ್ತೇವೆ. ಈ ಸಂದರ್ಭದಲ್ಲಿ ಪ್ರಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್‌ನ ಮಾತುಗಳು ನಿಜಕ್ಕೂ ಸ್ಮರಣೀಯವಾದದ್ದು: ''ನನ್ನ ಆಂತರಿಕ ಮತ್ತು ಬಾಹ್ಯ ಜೀವನ ಇತರರ ಶ್ರಮದ ಫಲದ ಮೇಲೆಯೇ ಅವಲಂಬಿತವಾಗಿದೆ. ಅವರೆಲ್ಲ ಇನ್ನೂ ಬದುಕಿರಬಹುದು ಅಥವಾ ಇಲ್ಲದೇ ಇರಬಹುದು. ನಾನು ಪಡೆದಿರುವ, ಈಗಲೂ ಪಡೆಯುತ್ತಿರುವ ಸಹಾಯಕ್ಕೆ ಪ್ರತಿಯಾಗಿ ಏನನ್ನಾದರೂ ನೀಡಲು ಸದಾ ನಾನು ಪ್ರಯತ್ನಿಸುತ್ತಿರುತ್ತೇನೆ. ದಿನದಲ್ಲಿ ನೂರು ಸಲ ನನಗೆ ನಾನೇ ಇದನ್ನು ಹೇಳಿಕೊಳ್ಳುತ್ತೇನೆ. ಪ್ರತಿಯೊಬ್ಬರೂ ಈ ನುಡಿಗಳನ್ನು ಪ್ರಾಮಾಣಿಕವಾಗಿ ಪಾಲಿಸಲು ಯತ್ನಿಸಿದರೆ ಎಂತಹ ಸಮಾಜದ ನಿರ್ಮಾಣವಾಗಬಹುದು ಎಂದು ಊಹಿಸಿಕೊಂಡು, ಮನಸ್ಸು ನಿರಾತಂಕ ಹೊಂದಿ ಶಾಂತಿ, ನೆಮ್ಮದಿಗಳ ಬೀಡಾಗುವುದು.''

ನ್ಯೂಯಾರ್ಕ್‌ನಲ್ಲಿ ಟ್ಯಾಕ್ಸಿ ಚಾಲಕರಾದ ದತ್ತಶರ್ಮ ಅವರ ಪತ್ನಿ ಓರ್ವ ನರ್ಸ್. ಅಮೇರಿಕಾದಂಥ ದುಬಾರಿ ದೇಶದಲ್ಲಿ ಈ ದಂಪತಿಗಳು ಕಟ್ಟಿನಿಟ್ಟಾದ, ಮಿತವ್ಯಯದ ಸರಳ ಬದುಕು ನಡೆಸುತ್ತಾ ಭಾರತದಲ್ಲಿನ ತಮ್ಮ ಗ್ರಾಮದ ಶಾಲೆಯ ಪೋಷಣೆಗೆ ಪ್ರತಿ ವರ್ಷ ತಮ್ಮಿಬ್ಬರ ಉಳಿತಾಯದ ೨೫೦೦ ಡಾಲರ್‌ಗಳನ್ನು ಕಳುಹಿಸುತ್ತಾರೆ. *('ಕೈತುತ್ತು', ಪು. ೬೬)*

ಶಿಕ್ಷಕರ ದಿನಾಚರಣೆಯಲ್ಲಿ ಉತ್ತಮ ಶಿಕ್ಷಕರೆಂದು ಸನ್ಮಾನಿಸಲ್ಪಟ್ಟ ಅಧ್ಯಾಪಕ ಚಕ್ರವರ್ತಿ ಶ್ರೀಧರ್‌ರವರು ಅವಿವಾಹಿತರಾಗಿ ಉಳಿದುಕೊಂಡು, ತಮಗೆ ಬರುವ ವೇತನದಲ್ಲಿ ತಮ್ಮ ಸ್ವಂತದ ಖರ್ಚುವೆಚ್ಚಕ್ಕಾಗಿ ಕನಿಷ್ಠತಮ ಹಣವನ್ನು ಇರಿಸಿಕೊಂಡು ಮಿಕ್ಕ ಹಣವನ್ನು ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳ ಪಠ್ಯಪುಸ್ತಕ, ಶುಲ್ಕ, ಬಟ್ಟೆಬರೆ, ಹಾಸ್ಟೆಲ್ ವೆಚ್ಚಕ್ಕೆ ನೀಡುವರು. ನಿವೃತ್ತಿಯ ಅಂಚಿನಲ್ಲಿರುವಾಗ ತಮಗೆ ಬರುತ್ತಿದ್ದ ರೂ.೧೮,೦೦೦/- ವೇತನದಲ್ಲಿ ತಮಗಾಗಿ ರೂ. ೧೫೦೦/- ಹಾಗೂ ವಿದ್ಯಾರ್ಥಿಗಳಿಗಾಗಿ ರೂ. ೧೬,೫೦೦/- ಖರ್ಚು ಮಾಡುತ್ತಿದ್ದರು. ನಿವೃತ್ತರಾದಾಗ ಕೈಗೆ ಬಂದ ಹಣವನ್ನೂ ಉನ್ನತ ವ್ಯಾಸಂಗದಲ್ಲಿ ತೊಡಗಿರುವ ೪೪ ವಿದ್ಯಾರ್ಥಿಗಳಿಗೆ ಹಂಚಿಬಿಟ್ಟರು! *('ಕೈತುತ್ತು', ಪು. ೬೪)*

ವ್ಯಕ್ತಿ ತನ್ನ ಪ್ರಕೃತಿಯಿಂದ ಮೇಲೆದ್ದು, ಇಡೀ ಸಮಾಜವನ್ನು ಕುರಿತು ಯೋಚಿಸುವ, ಸಮಜದ ಸುಖ-ದುಃಖಗಳ ಸಂವೇದನೆಗಳಲ್ಲಿ ಒಂದಾಗುವ ಪ್ರೇರಣೆಯನ್ನು ಸಂಸ್ಕೃತಿ ನಮಗೆ ನೀಡುತ್ತದೆ. ಅಮೇರಿಕ ಅಧ್ಯಕ್ಷರಾಗಿದ್ದ ಜಾನ್. ಎಫ್. ಕೆನಡಿಯವರು, ''ನಿನ್ನ ರಾಷ್ಟ್ರ ನಿನಗೇನು ನೀಡುತ್ತದೆ ಎಂದು ಚಿಂತಿಸಬೇಡ. ನೀನು ನಿನ್ನ ದೇಶಕ್ಕೆ ಕೊಡುವ ಕೊಡುಗೆ ಏನು ಎನ್ನುವುದರ ಬಗ್ಗೆ ಚಿಂತಿಸು'' ಎಂದು ನಮ್ಮೆಲ್ಲರ ಹೆಗಲ ಮೇಲಿರುವ ಗುರುತರ ಜವಾಬ್ದಾರಿಯನ್ನು ಕುರಿತು ಎಚ್ಚರಿಸುತ್ತಿದ್ದಾರೆ.

ಯಾರೊಬ್ಬರೂ ಏಕಾಂಗಿಯಾಗಿ ಬದುಕಲಾರೆವು. ಆದ್ದರಿಂದ ಸಮಾಜದೊಡನೆ ಪ್ರೀತಿಪೂರ್ವಕ ಸಂಬಂಧ ಬೆಳೆಸಿಕೊಳ್ಳುವುದು ಸಹ ಪ್ರತಿಯೊಬ್ಬ ವ್ಯಕ್ತಿಯ ಸಾಮಾಜಿಕ ಜವಾಬ್ದಾರಿ.

## ನೈತಿಕ ಜವಾಬ್ದಾರಿ

ವ್ಯಕ್ತಿ ತಾನು ಸ್ವತಂತ್ರನಾಗಬೇಕು ಎಂಬ ಆಂತರಿಕ ತುಡಿತವೇ ನೈತಿಕತೆ ತಳಹದಿ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಅಂತಃಪ್ರೇರಣೆಯಿಂದ ಮೂಡಿ ಬರುವ ನೈತಿಕತೆ ಸ್ವಾಭಾವಿಕವಾದದು. ಈ ದೃಷ್ಟಿಯಿಂದ ನೋಡಿದಾಗ ಒಳ್ಳೆಯತನವೇ ನಮ್ಮ ನೈಜಸ್ವಭಾವ.

ಹೆಸರಾಂತ ವಕೀಲರೂ ಸಹ ಆಗಿದ್ದ ಅಬ್ರಾಹಾಂ ಲಿಂಕನ್‌ರವರು ಒಮ್ಮೆ ಯಾವುದೋ ಮೊಕದ್ದಮೆ ಹೂಡುವ ಸಿದ್ಧತೆಯಲ್ಲಿದ್ದರು. ಅದಕ್ಕೆ ಸಂಬಂಧಿಸಿದಂತೆ ಸಲಹೆ ಸೂಚನೆಗಳನ್ನು ಕೇಳುತ್ತಲೇ ಅದರ ಒಳಮರ್ಮವೆಲ್ಲ ಅರಿತ ಲಿಂಕನ್, ''ಕಾನೂನು ಪ್ರಕಾರ ಸರಿ, ಆದರೆ ನೈತಿಕವಾಗಿ ಅಲ್ಲ. ನಾನು ಖಂಡಿತವಾಗಿಯೂ ಇಂತಹ ಮೊಕದ್ದಮೆ ನಡೆಸಲಾರೆ. ವಕಾಲತ್ತು ಮಾಡುವಾಗ ನನ್ನ ಒಳ

ಮನಸ್ಸು 'ಲಿಂಕನ್, ನೀನೊಬ್ಬ ದೊಡ್ಡ ಸುಳ್ಳುಗಾರ, ವಂಚಕ ಎನ್ನುತ್ತಿರುತ್ತದೆ. ನನ್ನಿಂದ ಅದನ್ನು ಸಹಿಸಲಾಗದು. ಉದ್ಯೋಗಕ್ಕಾಗಿ ನನ್ನ ಸಮಯವನ್ನು ಮಾರುತ್ತೇನೆ, ಆದರೆ ಅಂತಃಕರಣವನ್ನಲ್ಲ' ಎಂದು ಗಂಭೀರವಾಗಿ ನುಡಿದರು. *('ಕೈತುತ್ತು', ಪು. ೨೮)* ನಮ್ಮ ಅಂತಃಸಾಕ್ಷಿಯು ಸಹಜವಾಗಿಯೇ ಋಜುಮಾರ್ಗದಲ್ಲಿ ನಡೆಯಲು ನಮ್ಮನ್ನು ಪ್ರೇರೇಪಿಸುತ್ತದೆ. ಆದರೆ ಆ ಧ್ವನಿಯನ್ನು ಗುರುತಿಸದೆ ಅಥವಾ ಕಿವಿಗೊಡದೆ ನಡೆಯುವ ಅಭ್ಯಾಸವಾದಲ್ಲಿ ಆ ಮನಃಸಾಕ್ಷಿಯ ಧ್ವನಿ ನಿಂತೇಹೋಗುತ್ತದೆ.

ತನ್ನ ಬಗ್ಗೆ ಉದಾತ್ತ ಕಲ್ಪನೆಯಿದ್ದರೆ ಜೀವನವೂ ಉದಾತ್ತವಾಗುತ್ತದೆ. ಆಗ ನೈತಿಕತೆಯು ಸ್ವಾಭಾವಿಕವಾಗಿ ಜೀವನದೊಂದಿಗೆ ಒಂದಾಗಿಬಿಡುತ್ತದೆ. ಭ್ರಷ್ಟಾಚಾರ, ಕೊಲೆ ಸುಲಿಗೆ, ಅತ್ಯಾಚಾರ, ಅನಾಚಾರ, ಮಾರಕಾಸ್ತ್ರಗಳು ಇತ್ಯಾದಿಗಳಿಗೆಲ್ಲಾ ನೈತಿಕತೆ ಕುಸಿಯುತ್ತಿರುವುದೇ ಮುಖ್ಯ ಕಾರಣವಾಗಿದೆ. ಎಲ್ಲರೂ ಸುಳ್ಳು, ವಂಚನೆ, ಹಿಂಸೆ, ಕಳ್ಳತನ ಇತ್ಯಾದಿಗಳಲ್ಲಿ ತೊಡಗಿದ್ದರೆ ಅಂತಹ ಸಮಾಜದಲ್ಲಿ ಯಾರೂ ನೆಮ್ಮದಿಯಿಂದ ಇರಲಾರರು. ''ಪ್ರಪಂಚದಲ್ಲಿ ಎಲ್ಲೇ ಕೆಟ್ಟದಿದ್ದರೂ ಪ್ರತಿಯೊಬ್ಬನೂ ಅದಕ್ಕೆ ಜವಾಬ್ದಾರ'' *(ಕೃತಿಶ್ರೇಣಿ, ಸಂ.೭, ಪು.೩೦೨)* ಎನ್ನುವ ಸ್ವಾಮಿ ವಿವೇಕಾನಂದರ ನುಡಿಯ ಕುರಿತು ನಾವೆಲ್ಲರೂ ಆಳವಾಗಿ ಚಿಂತಿಸಬೇಕಲ್ಲವೆ?

ವಿಶಾಖಪಟ್ಟಣದ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಸುಬ್ರಹ್ಮಣ್ಯಶಾಸ್ತ್ರಿಯವರು ಕ್ಯಾಂಪಸ್ಸಿನ ಸಮೀಪವೇ ಇದ್ದ ಓರ್ವ ಮೋಚಿಯ ಬಳಿ ಮುಂಗಡ ಹಣಕೊಟ್ಟು ಚಪ್ಪಲಿ ಹೊಲಿಸುತ್ತಿದ್ದರು. ಒಮ್ಮೆ ಹಾಗೆ ಹಣ ಕೊಟ್ಟ ಮರುದಿನದಿಂದ ಒಂದು ತಿಂಗಳಾದರೂ ಕಾಣಿಸಲಿಲ್ಲ. ಶಾಸ್ತ್ರಿಗಳು ರೂ. ೫೦-೬೦ ತಾನೇ ಎಂದು ಮರೆತೇಬಿಟ್ಟರು. ಅದಾದ ಎರಡು ವಾರಗಳಲ್ಲಿ ಒಬ್ಬ ಯುವಕ ಶಾಸ್ತ್ರಿಗಳ ಮನೆಗೆ ಬಂದು ಮೋಚಿ ತೀರಿಹೋದನೆಂದು, ತಾನು ಅವರ ಮಗನೆಂದು ಪರಿಚಯ ಮಾಡಿಕೊಂಡ. ತಂದೆ ಸಾಯುವ ಮೊದಲು ಹಣ ಅಥವಾ ಚಪ್ಪಲಿ ಹಿಂತಿರುಗಿಸೆಂದು ಮಗನಿಂದ ಭಾಷೆ ತೆಗೆದುಕೊಂಡಿದ್ದ. ಶಾಸ್ತ್ರಿಗಳು ಎಷ್ಟೇ ಬೇಡವೆಂದರೂ ತಂದೆಗಿತ್ತ ಭಾಷೆಗೆ ಅನುಸಾರವಾಗಿ ಮಗ ಸಾಲ ತೀರಿಸಿದ! *('ಕೈತುತ್ತು', ಪು. ೫೨)*

### ಕೌಟುಂಬಿಕ ಜವಾಬ್ದಾರಿ

ಕೌಟುಂಬಿಕ ಜವಾಬ್ದಾರಿಯನ್ನು ಕುರಿತು ಶ್ರೀರಾಮಕೃಷ್ಣರು ಬಹಳ ಸುಂದರವಾಗಿ ಹೀಗೆ ವಿವರಿಸುತ್ತಾರೆ:

''ಮನುಷ್ಯನಿಗೆ ದೇವಋಣ, ಋಷಿಋಣ, ಮಾತೃಋಣ, ಪಿತೃಋಣ, ಸ್ತ್ರೀಋಣ ಮುಂತಾದ ಅನೇಕ ಋಣಗಳಿವೆ. ತಂದೆ ತಾಯಿಗಳು ಮಕ್ಕಳನ್ನು ಹೆತ್ತು, ಹೊತ್ತು, ಸಾಕಿ, ಸಲಹಿ, ಬೆಳೆಸುತ್ತಾರೆ. ಅವರು ಸುಪ್ರೀತರಾದ ಹೊರತು, ಅವರ ಋಣ ತೀರಿಸದ ಹೊರತು ಸಾಧನೆ ಕರ್ಮಗಳಾವುವೂ ಫಲ ಬಿಡದು, ಏನನ್ನೂ ಸಾಧಿಸಲು ಆಗುವುದಿಲ್ಲ. ಸತಿಯ ಋಣ ತೀರಿಸಬೇಕಾದ್ದೆ. ಆಕೆ ಬದುಕಿರುವವರೆಗೆ ಅನ್ನಾಹಾರಾದಿಗಳನ್ನು ಒದಗಿಸುವುದು ಪತಿಯ ಜವಾಬ್ದಾರಿ. *(ವಚನವೇದ, ಭಾಗ ೧, ಪು.೪೫೦-೫೧).* ಮಕ್ಕಳು ತಮ್ಮ ಕಾಲ ಮೇಲೆ ತಾವೇ ನಿಂತುಕೊಳ್ಳಲು ಸಮರ್ಥರಾಗುವವರೆಗೆ ಅವರನ್ನು ನೋಡಿಕೊಳ್ಳಬೇಕು. ಹೆಣ್ಣು ಮಕ್ಕಳಿಗೆ ವಿವಾಹ ಮಾಡುವವರೆಗೂ ತಂದೆತಾಯಿಗಳ ಜವಾಬ್ದಾರಿ.'' *(ಅಲ್ಲೇ, ಪು. ೪೮).*

### ಕೆಲಸದಲ್ಲಿ ಜವಾಬ್ದಾರಿ

'ಸೋಮಾರಿತನವು ಮನುಷ್ಯನ ಶರೀರದಲ್ಲಿ ನೆಲೆಸಿರುವ ಮಹಾಶತ್ರು. ಉದ್ಯೋಗ ಪ್ರವೃತ್ತಿಯಂಥ ಬಂಧು ಬೇರೊಬ್ಬನಿಲ್ಲ. ಉದ್ಯೋಗಶೀಲದಿಂದ ಮನುಷ್ಯನಿಗೆ ಸಾವೆಂಬುದೇ ಇಲ್ಲ' ಎಂಬ ಭರ್ತೃಹರಿಯ ಈ ಹೇಳಿಕೆ, ಆಹಾರದಂತೆ ಕೆಲಸವೂ ಕೂಡ ಜೀವನದ ಒಂದು ಮೂಲಭೂತ ಆವಶ್ಯಕತೆ ಎಂಬುದನ್ನು ದೃಢಪಡಿಸುತ್ತದೆ.

ವ್ಯಕ್ತಿಯು ಕೆಲಸದ ಮೂಲಕವೇ ತನ್ನ ಅಂತಃಸಾಮರ್ಥ್ಯವನ್ನು, ಪ್ರತಿಭೆಯನ್ನು ಹೊರಗೆ ವ್ಯಕ್ತಪಡಿಸುವುದು ಸಾಧ್ಯ, ಮತ್ತು ಅವುಗಳ ಅಭಿವ್ಯಕ್ತಿ ವ್ಯಕ್ತಿತ್ವದ ಬೆಳವಣಿಗೆಗೆ ಅತ್ಯಗತ್ಯ. ಕಷ್ಟಪಟ್ಟು ದುಡಿಯದ ಹೊರತು ಏನೂ ದೊರೆಯದು ಎಂಬ ಸನಾತನ ನಿಯಮವನ್ನು ಮರೆಯಬಾರದು. ಈ ಪ್ರಪಂಚವೇ ಒಂದು ವಿರಾಟ್ ಯಜ್ಞ. ನಮ್ಮ ನಮ್ಮ ಕಾರ್ಯಕ್ಷೇತ್ರಗಳಲ್ಲಿ ನಾವು ಮಾಡುತ್ತಿರುವ ಕೆಲಸಗಳೆಲ್ಲವೂ ಈ ವಿರಾಟ್ ಯಜ್ಞದ ಒಂದು ಭಾಗ ಎಂಬ ಭಾವನೆಯಿಂದ ಮಾಡಬೇಕು. ಸಮಾಜದಿಂದ ನಾವು ಏನೆಲ್ಲಾ ಪಡೆದಿದ್ದೇವೋ ಅದಕ್ಕೆ ಪ್ರತಿಯಾಗಿ ನಾವು ಈ ರೂಪದಲ್ಲಿ ನೀಡುತ್ತಿದ್ದೇವೆ. ಇದೊಂದು ಕರ್ಮಯಜ್ಞವೆಂಬ ಭಾವವಿದ್ದರೆ ಕೆಲಸದಲ್ಲಿ ತಾನಾಗಿಯೇ ಅಚ್ಚುಕಟ್ಟು, ಆಸ್ಥೆ, ಪ್ರಾಮಾಣಿಕತೆ, ಕುಶಲತೆ ಎಲ್ಲವೂ ವ್ಯಕ್ತವಾಗುತ್ತದೆ. ''ಕುಳಿತು ತುಕ್ಕು ಹಿಡಿಯುವುದಕ್ಕಿಂತ ದುಡಿದು ಸವೆಯುವುದು ಮೇಲು.'' *(ಕೃತಿಶ್ರೇಣಿ, ಸಂ.೫, ಪು.೬೨)* ''ಕೆಲಸ, ಕೆಲಸ, ಕೆಲಸ. ಕಾಡುಹರಟೆ ಕೊನೆಗಾಣಲಿ.. ಪ್ರಾಣ ಹೋಗುವವರೆಗೂ ಕೆಲಸ! ಯಾರು ಬಲಹೀನರೋ ಅವರು ಬಹಳ ಉತ್ತಮ ಕೆಲಸಗಾರರಾಗಬೇಕು, ಪುರುಷ ಸಿಂಹರಾಗಬೇಕು'' *(ಕೃತಿಶ್ರೇಣಿ, ಸಂ.೪, ಪು.೨೫೪)* ಎಂಬ ಸ್ವಾಮಿ ವಿವೇಕಾನಂದರ ಕರೆಯನ್ನು ಆಲಿಸಬೇಕು. ಸಾಮಾಜಿಕ ಹಾಗೂ ನೈತಿಕ ಜವಾಬ್ದಾರಿಯ ಪ್ರಜ್ಞೆಯುಳ್ಳವನು ಸಹಜವಾಗಿಯೇ ಉತ್ತಮೋತ್ತಮ ರೀತಿಯಲ್ಲಿ ತನ್ನ ಕೆಲಸವನ್ನು ಮಾಡುತ್ತಾನೆ.

ಮತ್ತೊಂದು ಮುಖ್ಯ ವಿಷಯವೆಂದರೆ, ನಮ್ಮ ಉದ್ಯೋಗವನ್ನು ವೈಯಕ್ತಿಕ ಲಾಭಕ್ಕೆ ಬಳಸಬಾರದು. ಲಾಲ್‌ಬಹಾದ್ದೂರ್ ಶಾಸ್ತ್ರಿಗಳು ಪ್ರಧಾನಮಂತ್ರಿಯಾದಾಗ ಅವರ ಹಿರಿಯ ಮಗ ಹರಿಕೃಷ್ಣನಿಗೆ, ಅಶೋಕ್ ಲೇಲ್ಯಾಂಡ್ ಕಂಪೆನಿಯವರು ಸೀನಿಯರ್ ಜನರಲ್ ಮ್ಯಾನೇಜರ್ ಆಗಿ ಬಡ್ತಿ ನೀಡಿದರು. ಶಾಸ್ತ್ರಿಗಳು ತಕ್ಷಣ ಮಗನಿಗೆ ರಾಜಿನಾಮೆ ನೀಡಲು ಹೇಳಿದರು. ಅಷ್ಟೇ ಅಲ್ಲದೆ ತಾವು ಪ್ರಧಾನಿ